ಕರ್ನಾಟಕ ಸರ್ಕಾರ

# ಭ್ರಷ್ಟಾಚಾರ ನಿಗ್ರಹ ದಳ

## ಪತ್ರಿಕಾ ಪ್ರಕಟಣೆ

ದಿನಾಂಕ:27/03/2019.

ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲ್ಲೂಕು, ಕಸಬಾ ಹೋಬಳಿ, ತಮ್ಮೇನಹಳ್ಳಿ ಗ್ರಾಮದ ನಿವಾಸಿಯೊಬ್ಬರು ತಮ್ಮ ವಾಸದ ಮನೆಗೆ ಇ–ಸ್ವತ್ತು ಮಾಡಿಕೊಡಲು ಕೋರಿ ಚಿನ್ನಕೋಟೆ ಗ್ರಾಮ ಪಂಚಾಯ್ತಿಗೆ ಅರ್ಜಿಯನ್ನು ಸಲ್ಲಿಸಿಕೊಂಡಿರುತ್ತಾರೆ. ಶ್ರೀ.ಜಿ.ಮುನಿಯಪ್ಪ, ಕಾರ್ಯದರ್ಶಿ, ಚಿನ್ನಕೋಟೆ ಗ್ರಾಮ ಪಂಚಾಯ್ತಿ, ಬಂಗಾರಪೇಟೆ ತಾಲ್ಲೂಕು ರವರು ರೂ.5,000/– ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:27/03/2019 ರಂದು ಶ್ರೀ.ಜಿ.ಮುನಿಯಪ್ಪ ರವರು ದೂರುದಾರರಿಂದ ರೂ.5,000/– ಲಂಚದ ಹಣವನ್ನು ಪಡೆದು ಕೋಲಾರ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳಿಗೆ ಸಿಕ್ಕಿಬಿದ್ದಿರುತ್ತಾರೆ. ಆರೋಪಿಯನ್ನು ದಸ್ತಗಿರಿ ಮಾಡಿ, ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ, ತನಿಖೆ ಮುಂದುವರೆದಿದೆ.